REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

# ಪಟ್ಟಣ ಸಹಕಾರ ಬ್ಯಾಂಕುಗಳ ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 45 । 11 ಫೆಬ್ರವರಿ 2026 । ಬುಧವಾರ । ಪುಟಗಳು : 8 । ಬೆಲೆ : 2/-

## ರಿಸರ್ವ್ ಬ್ಯಾಂಕಿನಿಂದ ಡಿಜಿಟಲ್ ವಂಚನೆಗೊಳಗಾದ ಗ್ರಾಹಕರಿಗೆ ರೂ. 25 ಸಾವಿರ ಪರಿಹಾರ

**ಮುಂಬೈ :** ಡಿಜಿಟಲ್ ವಂಚನೆಗೆ ಒಳಗಾದ ಗ್ರಾಹಕರಿಗೆ ಒಂದು ಬಾರಿ ಪರಿಹಾರವಾಗಿ ರೂ.25 ಸಾವಿರ ಪಾವತಿಸುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ. 'ಒಟಿಪಿ' ಹಂಚಿಕೊಂಡು ವಂಚನೆಗೆ ಒಳಗಾದ ಗ್ರಾಹಕರಿಗೂ ಪರಿಹಾರ ಲಭಿಸಲಿದೆ. ಆದರೆ, ಒಬ್ಬ ಗ್ರಾಹಕ ಜೀವಿತಾವಧಿಯಲ್ಲಿ ಒಂದು ಬಾರಿ ಮಾತ್ರ (ಒಂದು ವಂಚನೆ ವಹಿವಾಟಿಗೆ) ಪರಿಹಾರ ಪಡೆಯಲು ಅರ್ಹ ಎಂದಿರುವ ಆರ್‌ಬಿಐ, ಶೀಘ್ರದಲ್ಲೇ, ಪರಿಹಾರ ನೀತಿಯ ಕರಡನ್ನು ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಪ್ರಕಟ ಮಾಡಲಾಗುವುದು ಎಂದಿದೆ.

ಆರ್‌ಬಿಐ ನಿರ್ವಹಿಸುತ್ತಿರುವ ಸುಮಾರು ರೂ.85 ಸಾವಿರ ಕೋಟಿ ಮೊತ್ತದ ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಯಿಂದ (ಡಿಇಎ) ಪರಿಹಾರದ ಮೊತ್ತವನ್ನು ವಂಚನೆಗೆ ಒಳಗಾದ ಗ್ರಾಹಕರ ಖಾತೆಗೆ ಪಾವತಿಸಲಾಗುವುದು ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು. ಹತ್ತು ವರ್ಷಗಳಿಂದ ಗ್ರಾಹಕರು ಹಿಂದಕ್ಕೆ ಪಡೆಯದ ಠೇವಣಿ ಮೊತ್ತವು ಈ ನಿಧಿಯಲ್ಲಿ ಸೇರಿಕೊಂಡಿದೆ.

ಬ್ಯಾಂಕ್ ಗ್ರಾಹಕ ತನ್ನ ತಪ್ಪಿನಿಂದ ಉದ್ದೇಶಪೂರ್ವಕವಲ್ಲದೆ ಡಿಜಿಟಲ್ ವಂಚನೆಗೆ ಒಳಗಾಗಿದ್ದರೆ, ನಾವು ಹೆಚ್ಚಿನ ಪ್ರಶ್ನೆ ಕೇಳದೆ ರೂ.25 ಸಾವಿರ ಪರಿಹಾರ ಪಾವತಿಸುತ್ತೇವೆ' ಎಂದು ಅವರು ಸ್ಪಷ್ಟಪಡಿಸಿದರು. 'ಡಿಜಿಟಲ್ ವಂಚನೆಗೆ ಒಳಗಾಗಿರುವುದು ಖಚಿತಗೊಂಡ ನಂತರ ಗ್ರಾಹಕರಿಗೆ 'ಡಿಇಎ' ನಿಧಿಯಿಂದ ಪರಿಹಾರ ವರ್ಗಾವಣೆ ಆಗಲಿದೆ' ಎಂದು ಆರ್‌ಬಿಐನ ಡೆಪ್ಯುಟಿ ಗವರ್ನರ್ ಜೆ. ಸ್ವಾಮಿನಾಥನ್ ಹೇಳಿದರು.

ಡಿಜಿಟಲ್ ವಂಚನೆಗೆ ತಿಳಿಯದೆ ಬಲಿಯಾಗುವ ಗ್ರಾಹಕರನ್ನು ಗಮನದಲ್ಲಿಟ್ಟುಕೊಂಡು ಪರಿಹಾರವನ್ನು ಘೋಷಿಸಲಾಗಿದೆ. ಇದರಿಂದ ಹೆಚ್ಚಿನ ಹಣಕಾಸು ಹೊರೆ ಬೀಳುವುದಿಲ್ಲ ಹೆಚ್ಚಿನ ಗ್ರಾಹಕರಿಗೆ ಪ್ರಯೋಜನ ದೊರೆಯಲಿದೆ. 'ಮೂರನೆಯ ಎರಡರಷ್ಟು ಡಿಜಿಟಲ್ ವಂಚನೆ ಪ್ರಕರಣಗಳ




ಮೊತ್ತವು ರೂ.50 ಸಾವಿರಕ್ಕಿಂತ ಕಡಿಮೆ ಇರುತ್ತದೆ. ಹೀಗಾಗಿ ವಂಚನೆಗೆ ಒಳಗಾದ ಹೆಚ್ಚಿನ ಗ್ರಾಹಕರು ಈ ಸೌಲಭ್ಯದ ಪ್ರಯೋಜನ ಪಡೆಯಲಿದ್ದಾರೆ' ಎಂದು ಆರ್‌ಬಿಐ ಅಧಿಕಾರಿಗಳು ಹೇಳಿದ್ದಾರೆ.

ಡಿಜಿಟಲ್ ವಂಚನೆಯಿಂದ ಕಳೆದುಕೊಂಡ ಮೊತ್ತವು ರೂ.25 ಸಾವಿರಕ್ಕಿಂತ ಕಡಿಮೆ ಇದ್ದರೆ, ವಂಚನೆಗೆ ಒಳಗಾದ ಮೊತ್ತದ ಶೇ.85ರಷ್ಟನ್ನು ಪಾವತಿಸಲಾಗುವುದು. ಹೆಚ್ಚಿನ ಮೊತ್ತದ ಪ್ರಕರಣಗಳಲ್ಲೂ ಪರಿಹಾರವನ್ನು ರೂ.25 ಸಾವಿರಕ್ಕೆ ನಿಗದಿಪಡಿಸಲಾಗಿದೆ ಎಂದು ಆರ್‌ಬಿಐ ಹೇಳಿದೆ.



**ಫಲಾನುಭವಿ ಖಾತೆಗೆ ಹಣ ವರ್ಗಾವಣೆ ವಿಳಂಬ ಆಗುವುದು ಮತ್ತು ಹಿರಿಯ ನಾಗರಿಕರು ವಂಚನೆಗೆ ಒಳಗಾಗದಂತೆ ನೋಡಿಕೊಳ್ಳಲು ಹೆಚ್ಚುವರಿ ದೃಢೀಕರಣ ಸೇರಿ ಹೆಚ್ಚುವರಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುವುದು**

**– ಸಂಜಯ್ ಮಲ್ಹೋತ್ರಾ,**
**ಆರ್‌ಬಿಐ ಗವರ್ನರ್**

## ಪ್ರಸಕ್ತ ಸಾಲಿನ ಅಂತಿಮ ದ್ವೈಮಾಸಿಕ ಹಣಕಾಸು ನೀತಿ ಪ್ರಕಟ : ರೆಪೊ ದರ ಯಥಾಸ್ಥಿತಿ ಮುಂದುವರಿಕೆ

**ಮುಂಬೈ :** ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2026–27ರ ಹಣಕಾಸು ವರ್ಷಕ್ಕೆ ಬಜೆಟ್ ಘೋಷಿಸಿದ ನಂತರದ ಮೊದಲ ಹಣಕಾಸು ನೀತಿ ಪರಿಶೀಲನೆ ಇದಾಗಿದ್ದು, ಡಿಸೆಂಬರ್‌ನಲ್ಲಿ 25 ಬೇಸಿಸ್ ಪಾಯಿಂಟ್ ದರ ಕಡಿತದ ನಂತರ, ಪ್ರಸಕ್ತ ಹಣಕಾಸು ವರ್ಷದ ಆರನೇ ಮತ್ತು ಅಂತಿಮ ದ್ವೈಮಾಸಿಕ ಹಣಕಾಸು ನೀತಿಯನ್ನು ಪ್ರಕಟಿಸಿದೆ. ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ, ಹಣಕಾಸು ನೀತಿ ಸಮಿತಿ ತಟಸ್ಥ ನಿಲುವಿನೊಂದಿಗೆ ಅಲ್ಪಾವಧಿಯ ಸಾಲ ದರ ಅಥವಾ ರೆಪೊ ದರವನ್ನು ಶೇ. 5.25ರಲ್ಲಿ ಉಳಿಸಿಕೊಳ್ಳಲು ನಿರ್ಧರಿಸಿದೆ ಎಂದು ಹೇಳಿದರು. ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರವು ಶೇ. 2ರ ಅಂತರದೊಂದಿಗೆ ಶೇ. 4ರಷ್ಟಿದೆ ಎಂದು ಖಚಿತಪಡಿಸಿಕೊಳ್ಳುವ ಕಾರ್ಯವನ್ನು ಸರ್ಕಾರವು ಕೇಂದ್ರ ಬ್ಯಾಂಕಿಗೆ ವಹಿಸಿದೆ. ಕಳೆದ ವರ್ಷ ಫೆಬ್ರವರಿಯಿಂದ, ಆರ್‌ಬಿಐ ನೀತಿ ದರವನ್ನು 125 ಬೇಸಿಸ್ ಪಾಯಿಂಟ್‌ಗಳಿಂದ ಕಡಿಮೆ ಮಾಡಿದೆ.

ಡಿಸೆಂಬರ್‌ನಲ್ಲಿ ನಡೆದ ತನ್ನ ಹಿಂದಿನ ನೀತಿ ಪರಿಶೀಲನೆಯಲ್ಲಿ, ಅದು ರೆಪೊ ದರವನ್ನು 25 ಬೇಸಿಸ್ ಪಾಯಿಂಟ್‌ಗಳಿಂದ ಶೇ. 5.25 ಇಳಿಸಿತ್ತು. ಹಣಕಾಸು ನೀತಿ ಸಮಿತಿಯ ಶಿಫಾರಸಿನ ಆಧಾರದ ಮೇಲೆ, ಆರ್‌ಬಿಐ ಕಳೆದ ವರ್ಷ ಫೆಬ್ರವರಿಯಿಂದ ಏಪ್ರಿಲ್ ಮಧ್ಯೆ ರೆಪೊ ದರವನ್ನು ತಲಾ 25 ಬೇಸಿಸ್ ಪಾಯಿಂಟ್‌ಗಳಿಂದ ಮತ್ತು ಜೂನ್‌ನಲ್ಲಿ 50 ಬೇಸಿಸ್ ಪಾಯಿಂಟ್‌ಗಳಿಂದ ಚಿಲ್ಲರೆ ಹಣದುಬ್ಬರವನ್ನು ಕಡಿಮೆ ಮಾಡಿತು. ಆದಾಗ್ಯೂ, ಆಗಸ್ಟ್‌ನಲ್ಲಿ ತನ್ನ ದರ ಕಡಿತವನ್ನು ನಿಲ್ಲಿಸಿತು.

ಯುಪಿಐ ದಾಖಲೆ ವಹಿವಾಟು 2
ಶ್ರೀ ಶಾಂತಪ್ಪಣ್ಣ ಮಿರಜಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಕರೋಶಿ ಶಾಖೆಯ ನೂತನ ಕಟ್ಟಡದ ಉದ್ಘಾಟನೆ ಹಾಗೂ ಗ್ರಾಹಕರ ಸಂಪರ್ಕ ಸಭೆ 4
ನಿಮ್ಮ ಪ್ರಶ್ನೆ ನಮ್ಮ ಉತ್ತರ 7

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



## ಮೊಬೈಲ್ ಕಲಿಕೆ ಸಾಧನವಾಗಬೇಕೇ ಹೊರತು, ಸಾವಿನ ಹಾದಿಯಾಗಬಾರದು

ನಮ್ಮ ಕಾಲದ ಬಾಲ್ಯದಲ್ಲಿ ಗದ್ದೆ, ಬಯಲು, ತೋಟ, ಬೆಟ್ಟ, ಗುಡ್ಡ, ತೋಪು, ನದಿದಂಡೆ ಎಲ್ಲವೂ ನಮಗೆ ಆಟದ ಅಂಗಳವೇ ಆಗಿ ಬಿಡುತ್ತಿತ್ತು. ಶಾಲೆ ಮುಗಿದ ಕೂಡಲೆ ಲಗೋರಿ, ಕಬಡಿ, ಚಿಣ್ಣಿದಾಡು, ಮರಕೋತಿ ಹೀಗೆ ಆಟಗಳಿಗೆ ಲೆಕ್ಕವಿಲ್ಲ. ಕುಣಿದು ಕುಪ್ಪಳಿಸಿ ದಣಿವಾದರೆ ಅಲ್ಲೆ ಕಬ್ಬು, ನೆಲಗಡಲೆ ಕಿತ್ತು ತಿನ್ನುವ, ಮರ, ಗಿಡ, ಬಳ್ಳಿಗಳಲ್ಲಿ ಸಿಗುವ ಹಣ್ಣು, ಕಾಯಿಗಳು ನಮ್ಮ ಉದರ ತುಂಬಿಸುತ್ತಿದ್ದವು.

ಆದರೆ, ಇಂದಿನ ಡಿಜಿಟಲ್ ಯುಗದಲ್ಲಿ ಆಟದ ಮೈದಾನಗಳಲ್ಲಿ ಆಟೋಟದಲ್ಲಿ ಇರಬೇಕಾದ ಮಕ್ಕಳು ಮೊಬೈಲ್ ಫೋನ್‌ಗಳ ಕೈಯಲಿಡಿದು ಗಂಟೆಗಟ್ಟಲೆ ಕುಳಿತುಕೊಳ್ಳುತ್ತಿದ್ದಾರೆ. ಮೊಬೈಲ್ ಆಟಗಳು, ಸಾಮಾಜಿಕ ಜಾಲತಾಣಗಳು, ವೀಡಿಯೊಗಳು ಮಕ್ಕಳ ಗಮನವನ್ನು ಸಂಪೂರ್ಣವಾಗಿ ಕಸಿದುಕೊಳ್ಳುತ್ತಿವೆ. ಇದರ ಪರಿಣಾಮವಾಗಿ ಮಕ್ಕಳ ದೈಹಿಕ ಚಟುವಟಿಕೆ ಕಡಿಮೆಯಾಗಿದ್ದು, ಕಣ್ಣು, ಕುತ್ತಿಗೆ, ಮೆದುಳು ಸಂಬಂಧಿತ ಸಮಸ್ಯೆಗಳು ಹೆಚ್ಚಾಗುತ್ತಿವೆ. ಜೊತೆಗೆ, ಓದಿನಲ್ಲಿ ಏಕಾಗ್ರತೆ ಇಲ್ಲವಾಗಿದ್ದು, ಪರೀಕ್ಷೆಯ ಆತಂಕದಿಂದ ಮನಸ್ಸು ಮುದುಡುತ್ತಿದೆ.

ಪರಿಕ್ಷೆ ಹತ್ತಿರ ಬಂತು ಮೊಬೈಲ್ ಹೆಚ್ಚು ನೋಡ್ಬೇಡ ಎಂದು ಪೋಷಕರು ಬುದ್ಧಿ ಹೇಳಿದ್ದಕ್ಕೆ ಬಾಲಕಿಯೊಬ್ಬಳು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡರೆ, ಮೊಬೈಲ್ ಗೀಳಿಗೆ 13 ವರ್ಷದ ಬಾಲಕನೋರ್ವ ನೇಣಿಗೆ ಶರಣಾಗಿರುವ ಘಟನೆ ನಗರವೊಂದರಲ್ಲಿ ನಡೆದಿದೆ. ಪೋಷಕರು ಮೊಬೈಲ್ ಬಳಸಬೇಡ ಎಂದು ಹೇಳಿದ್ದಕ್ಕೆ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಬಾಲಕಿಯೊಬ್ಬಳು ಆತ್ಮಹತ್ಯೆಗೆ ಶರಣಾದ ಘಟನೆ ಹಳ್ಳಿಯೊಂದರಲ್ಲಿ ನಡೆದಿದೆ.

ತೀರ ಇತ್ತೀಚಿನ ಸುದ್ದಿ ಉತ್ತರ ಭಾರತದ ನಗರವೊಂದರಲ್ಲಿ ಕೊರಿಯನ್ ಮೊಬೈಲ್ ಗೇಮಿಂಗ್ ಚಟಕ್ಕೆ ಬಿದ್ದ ಮೂವರು ಸಹೋದರಿಯರು ತಮ್ಮ ಪ್ಲ್ಯಾಟಿನ 9ನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಎಲ್ಲರಂತೆ ನನ್ನನ್ನು ತಲ್ಲಣಗೊಳಿಸಿದೆ. ಈ ರೀತಿಯಾದ ಘಟನೆಗಳು ಎಲ್ಲೆಡೆ ನಡೆಯುತ್ತಲೇ ಇರುವುದನ್ನು ನಾವು ನಿತ್ಯ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ.

ಇಂದು ಮೊಬೈಲ್ ಫೋನ್ ಮಕ್ಕಳಿಗೆ ಶಿಕ್ಷಣಕ್ಕೆ ಸ್ವಲ್ಪ ಮಟ್ಟಿಗೆ ಅಗತ್ಯ ನಿಜ, ಆದರೆ ಈ ಅವಶ್ಯಕತೆಗಳು ಅತಿಯಾದ ಬಳಕೆಯಿಂದಾಗಿ, ಮಕ್ಕಳು ಗಂಭೀರ ಸ್ವರೂಪದ ವ್ಯಸನ ರೂಪ ತಾಳುತ್ತಿರುವುದು ಗಂಭೀರ ಚಿಂತನೆಯ ವಿಷಯವಾಗಿದೆ. ಡಿಜಿಟಲ್ ವ್ಯಸನವು ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಸ್ನೇಹಿತರೊಂದಿಗೆ ಕೀಟಲೆ, ತುಂಟಾಟ ಕಡಿಮೆಯಾಗಿದ್ದು, ತಂದೆ ತಾಯಿ, ಇತರ ಸಂಬಂಧಿಗಳೊಳಗಿನ ಮಾತು-ಕಥೆಗಳು ಅಪರೂಪವೆಂಬಂತಾಗಿದೆ. ಇದೆಲ್ಲದರ ಪರಿಣಾಮವಾಗಿ ಸಂವೇದನಾಶೀಲತೆ, ಸಹಾನುಭೂತಿ ಮತ್ತು ಸಾಮಾಜಿಕ ಮೌಲ್ಯಗಳು ಕುಗ್ಗುತ್ತಿವೆ. ಇದರಿಂದ ಅವರುಗಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿರುವಂತೆ ಕಂಡುಬರುತ್ತಿದೆ.

ಈ ಸಮಸ್ಯೆಯನ್ನು ಪರಿಹರಿಸಲು ಪೋಷಕರು, ಶಿಕ್ಷಕರು, ಸಮಾಜದ ಪ್ರಜ್ಞಾವಂತರು ಮುಂದಾಗಬೇಕಿದೆ. ಮಕ್ಕಳಿಗೆ ತಂತ್ರಜ್ಞಾನವನ್ನು ನಿರಾಕರಿಸುವುದಕ್ಕಿಂತ, ಅದರ ಸೂಕ್ತ ಬಳಕೆಯನ್ನು ತಿಳಿಸುವುದಗತ್ಯ. ಆಟಗಳಿಗೆ ಉತ್ತೇಜನ, ಓದುವ ಅಭ್ಯಾಸ ಮತ್ತು ಮನೆಯವರೊಂದಿಗೆ ಬೆರೆಯುವುದನ್ನು ಕಲಿಸಬೇಕು. ಮೊಬೈಲ್ ಕಲಿಕೆ ಸಾಧನವಾಗಬೇಕೇ ಹೊರತು, ಸಾವಿನ ಹಾದಿಯಾಗಬಾರದು. ಇದು ಮಕ್ಕಳ ಭವಿಷ್ಯಕ್ಕಾಗಿ ನಾವು ಕಲಿಸಬೇಕಾದ ಮಹತ್ವದ ಪಾಠ.

▶▶ ಎಚ್.ಕೆ. ಪಾಟೀಲ

## ಯುಪಿಐ ದಾಖಲೆ ವಹಿವಾಟು

**ಹೊಸದಿಲ್ಲಿ :** ಬ್ಯಾಂಕಿಂಗ್ ವಲಯವು ಡಿಜಿಟಲ್ ಸ್ವರೂಪ ಪಡೆದ ನಂತರ ಯುಪಿಐ (ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್) ಪಾವತಿ ವಿಧಾನ ಬಳಕೆ ಹೆಚ್ಚುತ್ತಿದೆ. 2025-26ನೇ ಸಾಲಿನ ಹಣಕಾಸು ವರ್ಷದ ಡಿಸೆಂಬರ್ ಅಂತ್ಯಕ್ಕೆ ದೇಶಾದ್ಯಂತ ದಾಖಲೆಯ 230ಲಕ್ಷ ಕೋಟಿ ರೂ.ಮೊತ್ತದ ಯುಪಿಐ ವಹಿವಾಟು ನಡೆದಿದೆ.




ಪ್ರಶ್ನೋತ್ತರ ಅವಧಿಯಲ್ಲಿ ಪೂರಕ ಪ್ರಶ್ನೆಗೆ ಹಣಕಾಸು ಖಾತೆ ಸಹಾಯಕ ಸಚಿವ ಪಂಕಜ್ ಚೌಧರಿ ಈ ವಿಷಯವನ್ನು ರಾಜ್ಯಸಭೆಗೆ ತಿಳಿಸಿದರು. "ಯುಪಿಐ ವಹಿವಾಟು ವೇಗವಾಗಿ ಬೆಳೆಯುತ್ತಿದೆ. ಕರೆನ್ಸಿ ಪರಿವರ್ತನೆಯ ನಂತರ ಮತ್ತು ಸ್ಥಳೀಯ ಕಾನೂನುಗಳಿಗೆ ಅನುಸಾರವಾಗಿ ಯುಪಿಐ ಈಗ ಭಾರತದ ಹೊರಗೆ ಬಳಸಲಾಗುತ್ತಿದೆ. ಸದ್ಯ ಎಂಟು ದೇಶಗಳಲ್ಲಿ ಬಳಕೆಯಲ್ಲಿದೆ," ಎಂದು ಸಚಿವರು ಮಾಹಿತಿ ನೀಡಿದರು.

## ಅಡಮಾನ ರಹಿತ ಸಾಲದ ಮಿತಿ 20 ಲಕ್ಷ ರೂ.ಗೆ ಹೆಚ್ಚಳ

**ಮುಂಬೈ:** ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳಿಗೆ ಪೂರಕ ಭದ್ರತೆ ಇಲ್ಲದೆ ನೀಡುವ ಸಾಲದ ಮಿತಿಯನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್.ಬಿ.ಐ.) 10 ಲಕ್ಷ ರೂಪಾಯಿಯಿಂದ 20 ಲಕ್ಷ ರೂಪಾಯಿಗೆ ಹೆಚ್ಚಿಸಿದೆ.

ಎಂಎಸ್‌ಇ ಗಳಿಗೆ ಅಡಮಾನ ರಹಿತವಾಗಿ ನೀಡುವ ಸಾಲದ ಮಿತಿಯನ್ನು ಆರ್.ಬಿ.ಐ. 10 ಲಕ್ಷ ರೂ.ನಿಂದ 20 ಲಕ್ಷ ರೂ.ಗೆ ಹೆಚ್ಚಿಸಿದ್ದು, ಮುಂದಿನ ಹಣಕಾಸು ವರ್ಷದಿಂದ ಮಂಜೂರಾಗುವ ಸಾಲಗಳಿಗೆ ಇದು ಅನ್ವಯವಾಗಲಿದೆ. ಈ ಕುರಿತಾದ ಮಾರ್ಗಸೂಚಿಗಳನ್ನು ಆರ್.ಬಿ.ಐ. ಶೀಘ್ರವೇ ಬಿಡುಗಡೆ ಮಾಡಲಿದೆ.

ಇನ್ನು ಕಿಸಾನ್ ಕ್ರೆಡಿಟ್ ಕಾರ್ಡ್ ಮಾರ್ಗಸೂಚಿಗಳ ಪರಿಷ್ಕರಣೆಗೆ ಆರ್‌ಬಿಐ ಮುಂದಾಗಿದ್ದು, ಕಿಸಾನ್ ಕ್ರೆಡಿಟ್ ಕಾರ್ಡ್ ಅವಧಿಯನ್ನು 6 ವರ್ಷಕ್ಕೆ ವಿಸ್ತರಿಸಲಾಗುವುದು. ವ್ಯಾಪ್ತಿಯನ್ನು ಹೆಚ್ಚಳ ಮಾಡಲಾಗುವುದು. ಈ ಕುರಿತಾದ ಮಾರ್ಗಸೂಚಿ ಸಿದ್ಧಪಡಿಸಿ ಶೀಘ್ರದಲ್ಲೇ ಕರಡು ಮಾರ್ಗಸೂಚಿ ಪ್ರಕಟಿಸಲಾಗುವುದು ಎಂದು ಹೇಳಲಾಗಿದೆ.

## ದಿನಾಂಕ : 27.02.2026ರಂದು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಮಹಿಳಾ ನಿರ್ದೇಶಕರುಗಳಿಗೆ ಮತ್ತು ಮಹಿಳಾ ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ದೇಶಕರು ಹಾಗೂ ಮಹಿಳಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಹಂಪಿಯಲ್ಲಿ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ

**ಬೆಂಗಳೂರು:** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಮಹಿಳಾ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಮತ್ತು ಮಹಿಳಾ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಮಹಿಳಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-583276, ತಾಲ್ಲೂಕು ಹೊಸಪೇಟೆ, ಜಿಲ್ಲೆ ವಿಜಯನಗರ ಇಲ್ಲಿ ದಿನಾಂಕ : 27.02.2026ರಂದು ಏರ್ಪಡಿಸಲಾಗಿದೆ.

ಸದರಿ ವಿಚಾರ ಸಂಕಿರಣದಲ್ಲಿ Good Governance & Professionalism in UCBs Sector, Women Empowerment through Urban Co-operative Banks (UCBs), RBI's Regulatory Concerns for UCBs, Important Provisions of KCS Act & Rules ವಿಷಯಗಳ ಕುರಿತು ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ಸದರಿ ಕಾರ್ಯಕ್ರಮವನ್ನು ದಿನಾಂಕ : 27.02.2026ರಂದು ಬೆಳಿಗ್ಗೆ 8.30 ಗಂಟೆಗೆ ಉಪಹಾರ ಹಾಗೂ ನೋಂದಣಿಯೊಂದಿಗೆ ಪ್ರಾರಂಭಿಸಲಾಗುವುದು. ಸದರಿ ವಿಚಾರ ಸಂಕಿರಣದಲ್ಲಿ ಭಾಗವಹಿಸುವವರು ಮಹಾಮಂಡಳದಲ್ಲಿ ದಿನಾಂಕ : 21.02.2026ರ ಸಾಯಂಕಾಲ 5.00 ಗಂಟೆ ಒಳಗಾಗಿ ಮಹಾಮಂಡಳದ ಇ-ಮೇಲ್ ವಿಳಾಸ: kscubfed@gmail.comಕ್ಕೆ ಭಾಗವಹಿಸುವವರ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು. ತಾವುಗಳು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮಹಾಮಂಡಳದ ಪರವಾಗಿ ಕೋರಲಾಗಿದೆ.

## 12ನೇ ಬ್ಯಾಚ್ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ಲಿಖಿತ ಪರೀಕ್ಷೆಗಳು ದಿನಾಂಕ: 14.02.2026, 15.02.2026 ಮತ್ತು 28.02.2026 ಹಾಗೂ 01.03.2026 ರಂದು ಜರುಗಲಿವೆ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಗಳಿಗೆ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ್ನು ಆರ್‌ಐಸಿಎಂ, ಬೆಂಗಳೂರು ಈ ಸಂಸ್ಥೆಯ ಸಹಯೋಗದೊಂದಿಗೆ ಏರ್ಪಡಿಸಲಾಗಿದೆ. ಬೆಂಗಳೂರು ವಿಭಾಗಕ್ಕೆ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳು ದಿನಾಂಕ: 14.02.2026, 15.02.2026 ಮತ್ತು 28.02.2026 ಹಾಗೂ 01.03.2026 ರವರೆಗೆ ಒಟ್ಟು ನಾಲ್ಕು ದಿನಗಳು ಬೆಳಿಗ್ಗೆ 09.30 ರಿಂದ ಸಾಯಂಕಾಲ 05.30 ಗಂಟೆಯವರೆಗೆ ಲಿಖಿತ ಪರೀಕ್ಷೆಗಳು ಆರ್.ಐ.ಸಿ.ಎಂ. ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು-560070 ಇಲ್ಲಿ ನಡೆಯಲಿವೆ.

ವಿಜಯಪುರ ವಿಭಾಗಕ್ಕೆ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳು ದಿನಾಂಕ:14.02.2026, 15.02.2026 ಮತ್ತು 28.02.2026 ಹಾಗೂ 01.03.2026 ರವರೆಗೆ ಒಟ್ಟು ನಾಲ್ಕು ದಿನಗಳು ಬೆಳಿಗ್ಗೆ 09.30 ರಿಂದ ಸಾಯಂಕಾಲ 05.30 ಗಂಟೆಯವರೆಗೆ ಲಿಖಿತ ಪರೀಕ್ಷೆಗಳು "ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಪ್ರೌಢಶಾಲೆ", ವಿವೇಕನಗರ, ವಿಜಯಪುರ – 586 109 ಇಲ್ಲಿ ನಡೆಯಲಿವೆ. ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಉಪಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಅನಿಲ್ ಎಚ್. ಕಿರೇಸೂರ (7411332655) ಮತ್ತು ಶ್ರೀ ಹೆಚ್.ಸಿ. ಶ್ರೀನಿವಾಸ್ (9110642779) ಇವರುಗಳನ್ನು ಸಂಪರ್ಕಿಸಬಹುದಾಗಿದೆ.

## ಬೀಳ್ಕೊಡುಗೆ





**ವಿಜಯಪುರ :** ವಿಜಯಪುರ ಜಿಲ್ಲೆಯ, ಮುದ್ದೇಬಿಹಾಳ ತಾಲೂಕಿನ, ನಾಲತವಾಡದಲ್ಲಿನ ಶ್ರೀ ಶರಣ ವೀರೇಶ್ವರ ಸಹಕಾರಿ ಬ್ಯಾಂಕ್ ನಿಯಮಿತ, ಇದರ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಅಶೋಕ ಎಸ್ ಹಡಲಗೇರಿ ಯವರು ದಿನಾಂಕ: 31-01-2026 ರಂದು ಸೇವಾ ನಿವೃತ್ತಿ ಹೊಂದಿದ್ದು, ಬ್ಯಾಂಕಿನ ಆಡಳಿತ ಮಂಡಳಿಯವರು ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರು ಆತ್ಮೀಯವಾಗಿ ಬಿಳ್ಕೊಡುಗೆ ಸಮಾರಂಭವನ್ನು ನೇರವೇರಿಸಿದ ಕ್ಷಣ.

# ಶ್ರೀ ಶಾಂತಪ್ಪಣ್ಣ ಮಿರಜಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಕರೋಶಿ ಶಾಖೆಯ ನೂತನ ಕಟ್ಟಡದ ಉದ್ಘಾಟನೆ ಹಾಗೂ ಗ್ರಾಹಕರ ಸಂಪರ್ಕ ಸಭೆ




**ಚಿಕ್ಕೋಡಿ :** ಶ್ರೀ ಶಾಂತಪ್ಪಣ್ಣ ಮಿರಜಿ ಅರ್ಬನ್ ಕೋ ಆಫ್ ಬ್ಯಾಂಕಿನ ಕರೋಶಿ ಶಾಖೆಯ ನೂತನ ಕಟ್ಟಡದ ಉದ್ಘಾಟನೆ ಹಾಗೂ ಗ್ರಾಹಕರ ಸಂಪರ್ಕ ಸಭೆ ಅದ್ದೂರಿಯಾಗಿ ಜರುಗಿತು. ಚಿಕ್ಕೋಡಿಯ ಶ್ರೀ ಸಂಪಾದನಾ ಮಹಾಸ್ವಾಮೀಜಿವರು ರಿಬ್ಬನ್ ಕತ್ತರಿಸಿ ಕಟ್ಟಡವನ್ನು ಉದ್ಘಾಟಿಸಿದರು.

ಶ್ರೀ ಸಂಪಾದನಾ ಸ್ವಾಮೀಜಿಗಳು ಮಾತನಾಡಿ ಶಾಂತಪ್ಪನ ಮಿರ್ಜಿ ಅವರು ಚಿಕ್ಕೋಡಿ ಹಾಗೂ ತಾಲೂಕಿನ ಅನೇಕ ಹಳ್ಳಿಗಳ ಅಭಿವೃದ್ಧಿಯಾಗಬೇಕೆಂದು ಈ ಬ್ಯಾಂಕ್ ಉದ್ಘಾಟಿಸಿದರು. ಪ್ರಥಮ ಸಹಕಾರ ರತ್ನ ಪ್ರಶಸ್ತಿ ವಿಜೇತ ಶಾಂತಪ್ಪಣ್ಣ ಮಿರ್ಜಿಯವರು ಎಲ್ಲಾ ಸಮಾಜ ಜಾತಿ ಧರ್ಮದವರನ್ನು ಪ್ರೀತಿಯಿಂದ ಕಾಣುತ್ತಿದ್ದರು ಎಂದರು.

ಬ್ಯಾಂಕಿನ ಅಧ್ಯಕ್ಷರಾದ ಮಹಾಂತೇಶ ಭಾತೆ ಮಾತನಾಡಿ ಸಂಸ್ಥಾಪಕರಾದ ಶಾಂತಪ್ಪಣ್ಣ ಮಿರಜಿಯವರು ಹಾಕಿಕೊಟ್ಟ ಹಾದಿಯಲ್ಲಿ ಒಳ್ಳೆಯ ರೀತಿಯಿಂದ ಬ್ಯಾಂಕ ಮುನ್ನಡೆಸಿಕೊಂಡು ಹೋಗುತ್ತಿದ್ದೇವೆ. ಕರೋಶೀ ಶಾಖೆ ಸಾಲ ಠೇವಣಿಯಲ್ಲಿ ಮುಂಚೂಣಿಯಲ್ಲಿ ಇದೆ. ಸರಿಯಾಗಿ ಸಾಲ, ಬಡ್ಡಿ ಸರಿಯಾಗಿ ತುಂಬಿದರೆ ಬ್ಯಾಂಕ್ ಅಭಿವೃದ್ದಿಯಾಯಾಗಲಿದೆ. ವಾಹನ ಸಾಲ, ಶಿಕ್ಷಣ ಸಾಲ, ಕ್ಯೂ ಆರ್ ಕೋಡ್, ATM ಸೇವೆ ಪ್ರಾರಂಭಿಸಲಾಗಿದೆ. ಮುಂದಿನ ದಿನಮಾನಗಳಲ್ಲಿ ಯುಪಿಐ, ಗೂಗಲ್ ಪೇ ಫೋನ್ ಬ್ಯಾಂಕಿಂಗ್ ಸೇವೆ ಪ್ರಾರಂಭಿಸಲಾಗುವುದು. ಗ್ರಾಹಕರ ಹಿತಾಸಕ್ತಿಯನ್ನು ಕಾಪಾಡಿ ಕರೋಶಿ ಶಾಖೆ, ಮಾದರಿ ಶಾಖೆ ಮಾಡಲಾಗುವುದು ಎಲ್ಲ ಸದಸ್ಯರು ಸಹಕರಿಸಬೇಕು ಎಂದರು.

ಸಂಜಯ್ ಪಾಟೀಲ ಮಾತನಾಡಿ ಶಾಂತಪ್ಪಣ್ಣ ಅವರ ದೂರದೃಷ್ಟಿಯಿಂದ ಆಗಿನ ಕಾಲದಲ್ಲಿ ಜನಸಾಮಾನ್ಯರಿಗೆ ಆರ್ಥಿಕ ಸೇವೆ ನೀಡುವ ದೃಷ್ಟಿಯಿಂದ ಸಹಕಾರಿ ತಳಹದಿ ಮೇಲೆ ಈ ಬ್ಯಾಂಕ್ ಉದ್ಘಾಟಿಸಲಾಗಿತ್ತು.ಈ ಬ್ಯಾಂಕ ರೈತರು, ಕಾರ್ಮಿಕರು, ಮಹಿಳೆಯರಿಗೆ ಹಾಗೂ ಬಡವರಿಗೆ ಆಧಾರವಾಗಿದೆ ಎಂದರು.

ಪ್ರಧಾನ ವ್ಯವಸ್ಥಾಪಕರಾದ ಆರ.ಎಸ್.ವಂದುರೆ ಮಾತನಾಡಿ ದಿವಂಗತ ಶ್ರೀ ಜಿ ಎಸ್ ಭಾತೆ ಅವರ ತರಹ ಹಾಲಿ ಮಹಾಂತೇಶ್ ಭಾತೆ ಅವರು ಬ್ಯಾಂಕಿನ ಅಭಿವೃದ್ಧಿಗಾಗಿ ಒಳ್ಳೆ ಕಾರ್ಯ ಮಾಡುತ್ತಿದ್ದಾರೆ. ಭಾತೆ ಮನೆತನ ಕಟ್ಟಡಕ್ಕಾಗಿ ಜಾಗವನ್ನು ನೀಡಿದ್ದಾರೆ.

ಈ ಸಂದರ್ಭದಲ್ಲಿ ಬ್ಯಾಂಕಿನ ನಿರ್ದೇಶರಾದ ಸುರೇಶ ಘರಬುಡೇ, ಚಂದರಗಿ ಕ್ರೀಡಾ ಶಾಲೆಯ ಉಪಾಧ್ಯಕ್ಷ ಮಹೇಶ ಭಾತೆ, ಗ್ರಾಮ ಪಂಚಾಯ್ತಿ ಅಧ್ಯಕ್ಷ ಪಂಚಾಕ್ಷರಿ ಹಳಿಜೋಳ, ಗ್ರಾಹಕ ಶಿವಾನಂದ ಕೆಸ್ತಿ ಮಾತನಾಡಿ ಬ್ಯಾಂಕಿಗೆ ಶುಭ ಹಾರೈಸಿದರು.

ಪ್ರಾರಂಭದಲ್ಲಿ ಹೋಮ ಹವನ, ಶ್ರೀ ಲಕ್ಷ್ಮಿ ಶ್ರೀ ಸರಸ್ವತಿ ದೇವಿ ಪೂಜಾ, ಧಾರ್ಮಿಕ ವಿಧಿ ವಿಧಾನಗಳು ನಡೆಯಿತು. ಗಣ್ಯರಿಂದ ಅತ್ಯಾಧುನಿಕ ಲಾಕರ್ ರೂಮ್ ಉದ್ಘಾಟಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕರೋಶಿ ನೂತನ ಕಟ್ಟಡಕ್ಕಾಗಿ ಶ್ರಮಿಸಿದವರಿಗೆ ಸತ್ಕರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಕೆಎಲ್ಇ ಸಂಸ್ಥೆಯ ನಿರ್ದೇಶಕ ಬಸವರಾಜ ಪಾಟೀಲ್, ಬ್ಯಾಂಕಿನ ಉಪಾಧ್ಯಕ್ಷ ಅಮರನಾಥ ಬಸರಗಿ, ಹಿರಿಯ ನಿರ್ದೇಶಕ ವಾಯ್.ಎಸ್. ಮಿರಜಿ, ಮಹಾವೀರ ಪಾಟೀಲ, ಆಯ್.ಎನ್. ಹಂಪಣ್ಣವರ್, ಅನಿಲ್ ಸದಲಗೆ, ಎಸ್.ಆರ್. ಪಾಟೀಲ, ಎಂ.ಎ. ಪಾಟೀಲ, ಸೌ ಎಂ.ಎಸ್. ದೇಸಾಯಿ, ಆರ್.ವೈ. ರೋಕಡೆ, ಎಂ.ವೈ. ಮಿರ್ಜಿ, ಎಂ.ಜೆ. ಲಡಗೆ, ಜೆ.ಎ. ಸಾಂಗಲೆ, ಎ.ಪಿ. ದಾನವಾಡೆ, ಸೌ. ಪಿ.ಪಿ. ಪಟ್ಟಣಕುಡೆ, ಆರ್.ಬಿ. ಧಾಮನ್ನವರ್, ಎ.ಆರ್. ಅಕ್ಕೊಳೆ ಸೇರಿದಂತೆ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಎಸ್.ಬಿ. ಜಮಾದಾರ್, ಶಾಖಾ ವ್ಯವಸ್ಥಾಪಕ ಎ.ಎ. ಕಮತೆ ಸೇರಿದಂತೆ ಬ್ಯಾಂಕಿನ ಸದಸ್ಯರು ಸಿಬ್ಬಂದಿ ವರ್ಗ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಎ.ಎ. ಪಾಟೀಲ ನಿರೂಪಿಸಿದರು, ಲೆಕ್ಕಾಧಿಕಾರಿ ಎನ್.ಬಿ. ಕೊಟಗಿ ವಂದಿಸಿದರು.

## ದಿ ಟೌನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಹೊಸಕೋಟೆ : ಪ್ರತಿಭಾ ಪುರಸ್ಕಾರ ಕಾರ್ಯಕ್ರಮ




**ಹೊಸಕೋಟೆ:** ಬ್ಯಾಂಕಿನ ವತಿಯಿಂದ ಪ್ರತಿ ವರ್ಷ ಪ್ರತಿಭಾವಂತ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಸದಸ್ಯರ ಮಕ್ಕಳಿಗೆ ಉಚಿತ ಆರ್ಥಿಕ ನೆರವಿನ ಚೆಕ್‌ಗಳನ್ನು ವಿತರಿಸುವ ಮೂಲಕ ಸದಸ್ಯರ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದ್ದು, ಅದರಂತೆ ಈ ಬಾರಿ ದಿನಾಂಕ : 31/01/2026ರಂದು ಬ್ಯಾಂಕಿನ ವತಿಯಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮವನ್ನು ಹೊಸಕೋಟೆ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರೂ, ಕರ್ನಾಟಕ ಸರ್ಕಾರದ ಕಿಯೋನಿಕ್ಸ್ ಸಂಸ್ಥೆಯ ಅಧ್ಯಕ್ಷರೂ ಆದ ಶ್ರೀ ಶರತ್‌ಕುಮಾರ್ ಬಚ್ಚೇಗೌಡರವರು ಉದ್ಘಾಟಿಸಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರದ ಚೆಕ್‌ಗಳನ್ನು ಪ್ರಧಾನ ಮಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಸ್.ಮಂಜುನಾಥ ರವರು ವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ಹೊಸಕೋಟೆ ತಾಲ್ಲೂಕಿನ ಉದ್ಯಮಿಗಳಾದ ಶ್ರೀ ಬಿ.ವಿ. ಬೈರೇಗೌಡ ರವರು, ಹೊಸಕೋಟೆ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎನ್. ಕೇಶವಮೂರ್ತಿ, ಯೋಜನಾ ಪ್ರಾಧಿಕಾರದ ನಿರ್ದೇಶಕರಾದ ಶ್ರೀ ಹೆಚ್.ಎಂ. ಸುಬ್ಬರಾಜು, ಮತ್ತು ಹೊಸಕೋಟೆ ಯೋಜನಾ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷರುಗಳಾದ ಶ್ರೀ ವಿ. ವಿಜಯಕುಮಾರ್ ಮತ್ತು ಶ್ರೀ ಸಿ. ಜಯರಾಜ್ ರವರು ಹಾಗೂ ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್.ಎ. ಕೃಷ್ಣ ರವರು ಅತಿಥಿಗಳಾಗಿ ಭಾಗವಹಿಸಿದ್ದರು.

ಹಾಗೂ ಈ ಕಾರ್ಯಕ್ರಮದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಅಕ್ಬರ್ ಪಾಷ ಮತ್ತು ನಿರ್ದೇಶಕರಾದ ಶ್ರೀ ಎನ್. ನಾಗರಾಜ್, ಶ್ರೀ ಹೆಚ್.ಎಸ್. ಗೋಪಾಲ @ ಗೋಪಿ, ಶ್ರೀ ಎ. ಅಫ್ಸರ್, ಶ್ರೀ ಕೆ. ಕಿರಣ್, ಶ್ರೀ ಕೆ.ಕಿರಣ್ ಕುಮಾರ್, ಶ್ರೀ ಬಿ. ನಾಗರಾಜು, ಶ್ರೀ ಜಿ.ಯು.ವಿಷ್ಣು, ಶ್ರೀ ಎಸ್.ಮುರಳಿ, ಶ್ರೀ ಎನ್. ಬಾಲಚಂದ್ರನ್, ಶ್ರೀಮತಿ ಬಿ. ವೆಂಕಟಲಕ್ಷ್ಮೀ, ಶ್ರೀಮತಿ ಎಂ. ಸರೋಜಮ್ಮ ಬಚ್ಚಣ್ಣ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಹೆಚ್.ಕೆ. ವಿಕ್ರಮ್ ಮತ್ತು ಶ್ರೀ ಆರ್. ಮಂಜುನಾಥ ರವರು ಭಾಗವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ಒಟ್ಟು 291 ಮಂದಿ ಸದಸ್ಯರ ಮಕ್ಕಳಿಗೆ ಒಟ್ಟು. ರೂ.12.18 ಲಕ್ಷ ರೂಗಳ ಪ್ರತಿಭಾ ಪುರಸ್ಕಾರ ಮತ್ತು ಉಚಿತ ಆರ್ಥಿಕ ನೆರವಿನ ಚೆಕ್‌ಗಳನ್ನು ಪ್ರಧಾನ ಮಾಡಲಾಯಿತು.

## ನಿವೃತ್ತ ಮುಖ್ಯಕಾರ್ಯನಿರ್ವಹಣಾಧಿಕಾರಿಗೆ ಸನ್ಮಾನ





**ಸಂಡೂರು:** ಸಂಡೂರಿನ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಯಾಗಿ 27 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಶ್ರೀಮತಿ ಎಂ.ಎಸ್. ರೇಣುಕಾ ಅವರನ್ನು ಬ್ಯಾಂಕಿನ ಆಡಳಿತ ಮಂಡಳಿ, ಸಿಬ್ಬಂದಿ ವರ್ಗವು ಹಾಗೂ ಸದಸ್ಯರಿಂದ ಬ್ಯಾಂಕಿನ ಸರ್ವ ಸದಸ್ಯರ ಸಭೆಯಲ್ಲಿ ಸನ್ಮಾನಿಸಲಾಯಿತು. ಎಂ.ಎಸ್. ರೇಣುಕಾ ಅವರು ತಮ್ಮ ಸೇವಾವಧಿಯಲ್ಲಿನ ಅನುಭವಗಳನ್ನು ಮೆಲುಕು ಹಾಕಿ, ಬ್ಯಾಂಕಿನ ಆಡಳಿತ ಮಂಡಳಿ, ಸಹೋದ್ಯೋಗಿಗಳು ಹಾಗೂ ಗ್ರಾಹಕರು ನೀಡಿದ ಸಹಕಾರ ಸ್ಮರಿಸಿದರು.

## ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ : ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಿರೋಧ ಆಯ್ಕೆ



ಶ್ರೀ ಸದಾಶಿವರೆಡ್ಡಿ
ಅಧ್ಯಕ್ಷರು



ಶ್ರೀ ಸಿ. ಚೆನ್ನಾರೆಡ್ಡಿ
ಉಪಾಧ್ಯಕ್ಷರು

**ಬೆಂಗಳೂರು :** ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕಿನ ಮುಂದಿನ ಐದು ವರ್ಷಗಳ ಅವಧಿಯ ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ರಿಟರ್ನಿಂಗ್ ಅಧಿಕಾರಿಯಾಗಿ ನೇಮಕವಾಗಿರುವ ಶ್ರೀ. ಹಮೀದುಲ್ಲಾ ಖಾನ್ ರವರು ಪ್ರಕಟಿಸಿರುವ ಚುನಾವಣಾ ವೇಳಾ ಪಟ್ಟಿಯ ಪ್ರಕಾರ ದಿನಾಂಕ : 25–01–2026ರ ಭಾನುವಾರದಂದು ನಿಗದಿಪಡಿಸಲಾಗಿತ್ತು.

ನಂತರ, ಚುನಾವಣಾ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಸಂಖ್ಯೆಯು, ಬ್ಯಾಂಕಿನ ಉಪನಿಯಮ ರೀತ್ಯಾ ಆಯಾ ಮತಕ್ಷೇತ್ರದಿಂದ ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಸಮನಾಗಿರುವುದರಿಂದ ದಿನಾಂಕ : 19/01/2026 ರಂದು ಬ್ಯಾಂಕಿನ ಆಡಳಿತ ಮಂಡಲಿಗೆ ಮುಂದಿನ ಐದು ವರ್ಷಗಳ ಅವಧಿಗೆ ಎಲ್ಲಾ ಹದಿಮೂರು ಅಭ್ಯರ್ಥಿಗಳಾದ ಡಾ. ಹೆಚ್.ಎ. ಅಮರ್, ಶ್ರೀ ಸಿ. ಚೆನ್ನಾ ರೆಡ್ಡಿ, ಶ್ರೀ. ಪಿ. ಜಗನ್ನಾಥ ರೆಡ್ಡಿ, ಶ್ರೀ. ಪಿ.ಎನ್. ನಂಜಾ ರೆಡ್ಡಿ, ಶ್ರೀ ಜಿ. ರಮೇಶ, ಶ್ರೀ ಸದಾಶಿವರೆಡ್ಡಿ, ಶ್ರೀ ಹೆಚ್.ಎಲ್. ಸೋಮಶೇಖರ್, ಡಾ. ಪರಮೇಶ ನಾಯ್ಕ, ಶ್ರೀ ಕೆ. ನರಸಿಂಹ, ಶ್ರೀ ಎಂ. ವೆಂಕಟಸ್ವಾಮಿ, ಶ್ರೀ ಎ. ಪಾಪಣ್ಣ, ಶ್ರೀಮತಿ ಕೆ. ಮಾಲ, ಶ್ರೀಮತಿ ವಿನುತಾ ಅಶ್ವತ್ಥ್ ಇವರುಗಳು ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದು, ತದನಂತರ ದಿನಾಂಕ : 28/01/2026 ರಂದು ನಡೆದ ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀ ಸದಾಶಿವರೆಡ್ಡಿ ಮತ್ತು ಉಪಾಧ್ಯಕ್ಷರಾಗಿ ಶ್ರೀ ಸಿ.ಚೆನ್ನಾರೆಡ್ಡಿ ಯವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜಿ. ಪ್ರವೀಣ್ ಕುಮಾರ್ ರವರು ತಿಳಿಸಿರುತ್ತಾರೆ.

## ಶಿರಾಳಕೊಪ್ಪದಲ್ಲಿ ಶಿವ ಸಹಕಾರಿ ಬ್ಯಾಂಕ್ ಶಾಖೆಯ ಸ್ವಂತ ಕಟ್ಟಡಕ್ಕೆ ಶಿಲಾನ್ಯಾಸ – ಶಂಕುಸ್ಥಾಪನೆ





**ಶಿಕಾರಿಪುರ :** ಶಿಕಾರಿಪುರದ ಶಿವ ಸಹಕಾರಿ ಬ್ಯಾಂಕ್ ತನ್ನ ಶಿರಾಳಕೊಪ್ಪ ಶಾಖೆಗೆ ಸ್ವಂತ ಕಟ್ಟಡ ನಿರ್ಮಾಣದ ಶಿಲಾನ್ಯಾಸ – ಶಂಕುಸ್ಥಾಪನೆ ಹಾಗೂ ಭೂಮಿಪೂಜೆ ಕಾರ್ಯಕ್ರಮವನ್ನು ದಿನಾಂಕ : 06–02–2026ರ ಶುಕ್ರವಾರ ಬೆಳಗ್ಗೆ 8.30ರ ಶುಭ ಮುಹೂರ್ತದಲ್ಲಿ ಅತ್ಯಂತ ಸಡಗರ ಮತ್ತು ಸಂಭ್ರಮದಿಂದ ನೇರವೇರಿಸಲಾಯಿತು.

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮಹಾದೇವ್ ಪಾಟೀಲರು ಭೂಮಿಪೂಜೆ ನೆರವೇರಿಸಿ ಶಿಲಾನ್ಯಾಸಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯ ಉಪಾಧ್ಯಕ್ಷರಾದ ಶ್ರೀಮತಿ ಲೀಲಾವತಿ ಶಿವಾನಂದಪ್ಪ ಹಾಗೂ ನಿರ್ದೇಶಕರಾದ ಶ್ರೀ ಗಣೇಶ್ ಎಲ್., ಶ್ರೀ ಮನು ಬಣಕಾರ್, ಶ್ರೀ ಹೆಚ್.ಎಸ್. ರವೀಂದ್ರ, ಶ್ರೀ ಎಸ್. ನಾಗರಾಜ, ಶ್ರೀ ಜಿ. ಷಣ್ಮುಖಪ್ಪ ಗಂಗೊಳ್ಳಿ, ಶ್ರೀ ಆರ್. ಶಿವಕುಮಾರ್, ಶ್ರೀಮತಿ ಶೋಭಾ ಸಿ.ಕೆ., ಶ್ರೀ ಬಿ. ಪರಮೇಶ್ವರಪ್ಪ, ಶ್ರೀ ಕೆ.ಎಂ. ಪ್ರಕಾಶ್ ಹಾಗೂ ಶ್ರೀ ಜಿ. ಪರಮೇಶ್ವರಪ್ಪ ಅವರುಗಳು ಉಪಸ್ಥಿತರಿದ್ದರು

ಈ ಸಂದರ್ಭದಲ್ಲಿ ಮಾಜಿ ಶಾಸಕರುಗಳಾದ ಶ್ರೀ ಹೆಚ್.ಎಸ್. ಶಾಂತವೀರಪ್ಪಗೌಡರು, ಶ್ರೀ ಬಿ.ಎನ್. ಮಹಾಲಿಂಗಪ್ಪನವರು, ಸಂಸ್ಥಾಪಕರ ಅಧ್ಯಕ್ಷರಾದ ಶ್ರೀ ಕೆ.ಜಿ.ಪ್ರಸನ್ನಕುಮಾರ ರವರು ಶ್ರೀ ಟಿ. ಶಿವಶಂಕರಪ್ಪನವರು ಮತ್ತು ಶ್ರೀ ಎಸ್.ಪಿ.ನಾಗರಾಜಗೌಡರು ಅಧ್ಯಕ್ಷರು ಗ್ಯಾರಂಟಿ ಅನುಷ್ಠಾನ ಸಮಿತಿ ಶಿಕಾರಿಪುರ, ಬ್ಯಾಂಕಿನ ಮಾಜಿ ಅಧ್ಯಕ್ಷರುಗಳಾದ ಶ್ರೀ ಕೆ. ರೇವಣಪ್ಪ ಕೊಳಗಿ ಶ್ರೀ ಎಂ.ಕೆ. ಶಶಿಧರಸ್ವಾಮಿ, ಶ್ರೀ ಜಿ. ಬಸವರಾಜಪ್ಪ ಗೌಡ್ರು, ಶ್ರೀ ಕೆ.ಜಿ. ನಿಜಲಿಂಗಪ್ಪಗೌಡ್ರು, ಶ್ರೀ ಎನ್.ಜಿ. ಚನ್ನಪ್ಪ ಮಾಜಿ ಉಪಾಧ್ಯಕ್ಷರಾದ ಶ್ರೀ ಜಿ. ರೇಣುಕೇಶ್ವರಪ್ಪ ಶ್ರೀ ದಾನೇಂದ್ರಪ್ಪ, ಶ್ರೀ ಜಿ. ನಾಗರಾಜಪ್ಪ, ಶ್ರೀ ಹೆಚ್. ಮಲ್ಲಪ್ಪ, ಶ್ರೀಮತಿ ಜ್ಯೋತಿರಮೇಶ, ಶ್ರೀ ಕೆ.ಜಿ. ಚಂದ್ರಕುಮಾರ ಹಾಗೂ ಮಾಜಿ ನಿರ್ದೇಶಕರುಗಳಾದ ಶ್ರೀ ಹೆಚ್.ವಿ. ಪರಮೇಶ್ವರಪ್ಪಗೌಡ್ರು, ಶ್ರೀಮತಿ ಕೆ.ಎನ್. ಸರ್ವಮಂಗಳ ಶ್ರೀ ಪಿ. ವೀರಪ್ಪ ಶ್ರೀ ಟಿ. ಬಸವನಗೌಡ ಶ್ರೀ ಜಿ.ಎಸ್. ವಿಜಯಕುಮಾರ್, ಶ್ರೀ ಜಿ.ಕೆ.ನಾಗರಾಜ್ ಇವರುಗಳು ಹಾಗೂ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ಕೆ.ಆರ್. ಬಸವರಾಜಪ್ಪನವರು, ಶಾಖಾ ವ್ಯವಸ್ಥಾಪಕರಾದ ಶ್ರೀ ಜಿ.ಪಿ. ಅರವಿಂದಕುಮಾರರವರು ಹಾಗೂ ಸಿಬ್ಬಂದಿ ವೃಂದ ಮತ್ತು ಮರಳುಸಿದ್ದ ಪಿಗ್ಮೀ ಸಂಗ್ರಹಕಾರರುಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಅಡಿಗಲ್ಲು ಸಮಾರಂಭವನ್ನು ಸಾಕ್ಷೀಕರಿಸಿದರು.

ಈ ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲಾ ಸಮಾಜದ ಮುಖಂಡರುಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲರಿಗೂ ಬ್ಯಾಂಕಿನ ಅಧ್ಯಕ್ಷರು ತುಂಬು ಹೃದಯದಿಂದ ಸ್ವಾಗತಿಸಿ ಆತ್ಮೀಯವಾಗಿ ವಂದಿಸಿದರು.




# ನಿಮ್ಮ ಪ್ರಶ್ನೆ ನಮ್ಮ ಉತ್ತರ



ಸುಧಾಕರ್ ಭಟ್, ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನಲ್ಲಿ ಒಬ್ಬ ಗ್ರಾಹಕ 5ಲಕ್ಷ ರೂಪಾಯಿ ಸ್ಥಿರ ಠೇವಣಿ ಇಟ್ಟಿದ್ದಾನೆ. ಆತನ ಪತ್ನಿ ಖಾತೆಗೆ ನಾಮಿನಿಯಾಗಿದ್ದಾಳೆ. ಠೇವಣಿದಾರ ಕಳೆದ 8 ವರ್ಷಗಳಿಂದ ನಾಪತ್ತೆಯಾಗಿದ್ದು, ತನಗೆ ಜೀವನ ಸಾಗಿಸಲು ಕಷ್ಟವಾಗುತ್ತದೆ ಎಂದು ಹೇಳಿ ಆತನ ಪತ್ನಿ ಠೇವಣಿ ಮೊತ್ತವನ್ನು ತನಗೆ ನೀಡಲು ಬೇಡಿಕೆ ಇಟ್ಟಿದ್ದಾಳೆ. ಇಂತಹ ಸಂದರ್ಭದಲ್ಲಿ ಬ್ಯಾಂಕು ಠೇವಣಿ ಮೊತ್ತವನ್ನು ಠೇವಣಿದಾರನ ನಾಮಿನಿಗೆ ನೀಡಬಹುದೇ? ಹೌದಾದರೆ ಕೈಗೊಳ್ಳಬೇಕಾಗಿರುವ ಕ್ರಮಗಳೇನು?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಳಗಾವಿ.**

**ಉತ್ತರ :** ಭಾರತೀಯ ಸಾಕ್ಷ್ಯ ಕಾಯ್ದೆ (Indian Evidence Act) ಪ್ರಕಾರ, ಒಬ್ಬ ವ್ಯಕ್ತಿಯ ಬಗ್ಗೆ ಸತತ 7 ವರ್ಷಗಳ ಕಾಲ ಯಾವುದೇ ಮಾಹಿತಿ ಇಲ್ಲದಿದ್ದರೆ ಅಥವಾ ಅವರು ಜೀವಂತವಾಗಿರುವ ಬಗ್ಗೆ ಅವರಿಗೆ ಹತ್ತಿರವಿರುವವರಿಗೆ ಯಾವುದೇ ಸುಳಿವು ಇಲ್ಲದಿದ್ದರೆ, ಅವರನ್ನು 'Civil Death' (ಕಾನೂನುಬದ್ಧ ಸಾವು) ಎಂದು ಪರಿಗಣಿಸಲಾಗುತ್ತದೆ. ಭಾರತೀಯ ರಿಸರ್ವ್ ಬ್ಯಾಂಕ್ (RBI)ನ 2025ರ ನೂತನ ಮಾರ್ಗಸೂಚಿಗಳ ಪ್ರಕಾರ, ಈ ಸಂದರ್ಭದಲ್ಲಿ ಬ್ಯಾಂಕ್ ನಾಮಿನಿಗೆ ಹಣವನ್ನು ಮರುಪಾವತಿಸಲು ಅವಕಾಶವಿದೆ.

ಬ್ಯಾಂಕಿನಿಂದ ಹಣವನ್ನು ಪಡೆಯಲು ನಾಮಿನಿಯು ಈ ಕೆಳಗಿನ ಹಂತಗಳನ್ನು ಅನುಸರಿಸಬೇಕಾಗುತ್ತದೆ:

- **ಎಫ್.ಐ.ಆರ್ (FIR) ಮತ್ತು ಪೊಲೀಸ್ ವರದಿ :** ವ್ಯಕ್ತಿ ಕಾಣೆಯಾದ ಬಗ್ಗೆ ದಾಖಲಿಸಿದ ಎಫ್.ಐ.ಆರ್ ಪ್ರತಿ ಮತ್ತು ಪೊಲೀಸರು ನೀಡಿದ 'ನಾನ್–ಟ್ರೇಸಬಲ್ ರಿಪೋರ್ಟ್' (ವ್ಯಕ್ತಿ ಪತ್ತೆಯಾಗಿಲ್ಲ ಎಂಬ ವರದಿ) ಕಡ್ಡಾಯ.
- **ನ್ಯಾಯಾಲಯದ ಆದೇಶ (Court Declaration) :** ಸಾಮಾನ್ಯವಾಗಿ ಬ್ಯಾಂಕುಗಳು ವ್ಯಕ್ತಿಯು ಮೃತಪಟ್ಟಿದ್ದಾರೆ ಎಂದು ಘೋಷಿಸುವ ನ್ಯಾಯಾಲಯದ ಡಿಕ್ರಿ ಅಥವಾ ಆದೇಶವನ್ನು ಕೇಳುತ್ತವೆ.
- **ನಾಮಿನಿ ಗುರುತಿನ ಚೀಟಿ :** ನಾಮಿನಿಯು ತನ್ನ ಆಧಾರ್ ಕಾರ್ಡ್, ಪಾನ್ ಕಾರ್ಡ್ ಮತ್ತು ಠೇವಣಿ ರಸೀದಿಗಳನ್ನು ಸಲ್ಲಿಸಬೇಕು.
- **ಪರಿಶೀಲನೆ (Due Diligence) :** ಬ್ಯಾಂಕ್ ತನ್ನದೇ ಆದ ಮಟ್ಟದಲ್ಲಿ ವಿಚಾರಣೆ ನಡೆಸಿ, ಹಕ್ಕುದಾರರು ಸರಿಯಾಗಿದ್ದಾರೆ ಎಂದು ಖಚಿತಪಡಿಸಿಕೊಳ್ಳುತ್ತದೆ.
- **ನಷ್ಟ ಪರಿಹಾರ ಬಾಂಡ್ (Indemnity Bond) :** ಭವಿಷ್ಯದಲ್ಲಿ ಮೂಲ ಠೇವಣಿದಾರರು ಮರಳಿ ಬಂದರೆ ಅಥವಾ ಬೇರೆ ಯಾರಾದರೂ ಹಕ್ಕು ಚಲಾಯಿಸಿದರೆ ಬ್ಯಾಂಕಿಗೆ ಯಾವುದೇ ನಷ್ಟವಾಗದಂತೆ ನಾಮಿನಿಯಿಂದ ಈ ಬಾಂಡ್ ಬರೆಸಿಕೊಳ್ಳಲಾಗುತ್ತದೆ.

# ವಾಸವಿ ಎಂ.ಎಸ್.ಸಿ.ಎಂ. ಕೋ–ಆಪರೇಟಿವ್ ಬ್ಯಾಂಕಿನ 3ನೇ ಶಾಖೆಯ ಉದ್ಘಾಟನೆ



**ಬೆಂಗಳೂರು:** ದಿನಾಂಕ : 06.02.2026ರಂದು ಬೆಂಗಳೂರು ನಗರದ ಕೆ.ಆರ್. ಪುರಂನಲ್ಲಿ ವಾಸವಿ ಎಂ.ಎಸ್.ಸಿ.ಎಂ. ಕೋ–ಆಪರೇಟಿವ್ ಬ್ಯಾಂಕ್ ಲಿ, ನ 3ನೇ ಶಾಖೆಯ ಉದ್ಘಾಟನಾ ಸಮಾರಂಭವನ್ನು ಶ್ರೀ ವಾಸವಿ ಪೀಠದ ಪೀಠಾಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಗಳು ನೆರವೇರಿಸಿದರು.

ಭದ್ರತಾ ಕೊಠಡಿಯನ್ನು ಕೇಂಬ್ರಿಡ್ಜ್ ಸಮೂಹ ಶಿಕ್ಷಣ ವಿದ್ಯಾಸಂಸ್ಥೆಗಳ ಅಧ್ಯಕ್ಷರಾಗಿರುವ ಶ್ರೀ ಡಿ.ಕೆ.ಮೋಹನ್ ಬಾಬುರವರು ಉದ್ಘಾಟಿಸಿದರು. ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ವಿಧಾನ ಪರಿಷತ್ ಶಾಸಕರಾದ ಶ್ರೀ ಡಿ.ಟಿ. ಶ್ರೀನಿವಾಸ್‌ರವರು ಲೋಕಾರ್ಪಣೆಗೊಳಿಸಿದರು. ಸಮಾರಂಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್.ಪಿ.ರವಿಶಂಕರ್, ವಿಶೇಷ ಆಹ್ವಾನಿತರಾಗಿ ಕೆ.ಆರ್.ಪುರಂ ಆರ್ಯವೈಶ್ಯ ಮಂಡಳಿ ಪ್ರಧಾನ ಕಾರ್ಯದರ್ಶಿ ಶ್ರೀ ಜಿ. ವೆಂಕಟೇಶ್ ಬಾಬು ರವರು ಭಾಗವಹಿಸಿದ್ದರು. ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ವೈ.ಎ. ಹರಿಕಿಶೋರ್, ಶ್ರೀ ವೈ.ಎಲ್. ಪ್ರಸಾದ್, ಶ್ರೀ ಎನ್.ಆರ್.ಸುರೇಂದ್ರನಾಥ್, ಶ್ರೀ ಎನ್.ಜಿ. ಶ್ರೀನಿವಾಸ್, ಶ್ರೀ ಬಿ.ಎಸ್. ಆದಿತ್ಯ, ಶ್ರೀ ಎನ್. ಮಂಜೇಶ್, ಶ್ರೀ ಜೆ. ರಾಮಕೃಷ್ಣ, ಶ್ರೀ ಎ. ವೆಂಕಟೇಶಯ್ಯ ಶೆಟ್ಟಿ, ಶ್ರೀ ಟಿ. ವಿನಯ್, ಶ್ರೀಮತಿ ಉಮಾಸಾಯಿರಾಮ್, ಬ್ಯಾಂಕಿನ ಪ್ರಭಾರ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಬಿ.ಎಂ.ಸರಸ್ವತಿ, ಪ್ರಧಾನ ವ್ಯವಸ್ಥಾಪಕರಾದ ಶ್ರೀ ಬಿ.ಎ.ಕೃಷ್ಣ ಭಗವಾನ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಕೊಪ್ಪಳದ ಕೇಸರ್ ಮಾವಿಗೆ ಭೌಗೋಳಿಕ ಸೂಚನಾ ಟ್ಯಾಗ್ (GI) ಪಡೆಯಲು ತೋಟಗಾರಿಕೆ ಇಲಾಖೆ ಪ್ರಯತ್ನ ನಡೆಸುತ್ತಿದೆ. ಈ ಮಾವು ಈಗಾಗಲೇ ವಿದೇಶಗಳಿಗೆ ರಫ್ತಾಗುತ್ತಿದ್ದು, ಹೆಚ್ಚಿನ ಬೇಡಿಕೆ ಹೊಂದಿದೆ. ಜಿಐ ಟ್ಯಾಗ್ ದೊರೆತರೆ ಇದರ ಮಾರುಕಟ್ಟೆ ಇನ್ನಷ್ಟು ವಿಸ್ತರಿಸಲಿದೆ.
- ಎಂಜಿನಿಯರ್ ವೃತ್ತಿಯ ವೆಂಕಟರಾಮನ್ ಅವರು ತಮ್ಮ ಮನೆಯ ಮೇಲಿನ 600 ಚದರ ಅಡಿಯಲ್ಲಿ ಹೂ, ಹಣ್ಣು, ತರಕಾರಿ, ಕಾಫಿ, ಕಬ್ಬು ಸೇರಿದಂತೆ ನೂರಕ್ಕೂ ಹೆಚ್ಚು ಗಿಡಗಳನ್ನು ಬೆಳೆಸಿದ್ದಾರೆ. ತಾಯಿಯ ನೆನಪಿಗೆ ನಿರ್ಮಿಸಿದ ಈ ತೋಟದಲ್ಲಿ ವಿಜ್ಞಾನ, ಸುಸ್ಥಿರತೆ, ಆಧ್ಯಾತ್ಮ ಮತ್ತು ಮಾನಸಿಕ ನೆಮ್ಮದಿ ಒಂದಾಗಿ ಬೆಸೆದುಕೊಂಡಿವೆ.
- ಆಂಧ್ರಪ್ರದೇಶದ ಕಿರಣ್ ಕೊಲಕುಲ ಎಂಬ ಉದ್ಯಮಿ ತಮ್ಮ ರೂ. 5 ಲಕ್ಷ ಬೆಲೆಯ ಮಾರುತಿ ಇಗ್ನಿಸ್ ಕಾರಿಗೆ ರೂ. 2.08 ಕೋಟಿ ಬೆಲೆಯ ಹೊಸ ನಂಬರ್ ಪ್ಲೇಟ್ ಖರೀದಿ ಮಾಡಿದ್ದಾರೆ. 'ಡಿಡಿಸಿ 001' ಸಂಖ್ಯೆಯ ಈ ನಂಬರ್ ಪ್ಲೇಟ್ ದೇಶದಲ್ಲಿ ದುಬಾರಿ ನಂಬರ್ ಪ್ಲೇಟ್ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ.
- ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಮಂಗರ್ಶಿಕೊಪ್ಪ ಎಂಬ ಪುಟ್ಟ ಗ್ರಾಮದ ಭುವನ್ ಎಸ್. ಎಂಬ ಬಾಲಕ ಇಂದಿರಾಗಾಂಧಿ ವಸತಿ ಶಾಲೆಯಲ್ಲಿ ಓದುತ್ತಿದ್ದು ಅಲ್ಲಿರುವ ಎಲ್ಲಾ 125 ಬಾಲಕರು ಹಾಗೂ ಸುಮಾರು 20ಕ್ಕೂ ಅಧಿಕ ಸಿಬ್ಬಂದಿಯ ಹೆಸರನ್ನು ಕೇವಲ ಅವರುಗಳ ಪಾದ ನೋಡಿಯೇ ಗುರುತಿಸುವ ವಿಶೇಷ ಸಾಮರ್ಥ್ಯ ಹೊಂದಿದ್ದಾನೆ.
- ಬೆಳಗಾವಿಯ ಸೌಂದತ್ತಿ ತಾಲೂಕಿನ ಮುರಗೋಡ ಗ್ರಾಮ ಶತಮಾನಗಳಷ್ಟು ಹಳೆಯದಾದ ವಿಶಿಷ್ಟವಾದ ಹಸುರು ಗಾಜಿನ ಬಳೆ ತಯಾರಿಕೆಗೆ ಹೆಸರುವಾಸಿಯಾಗಿದ್ದು, ಉತ್ತರ ಪ್ರದೇಶದ ಫಿರೋಜಾಬಾದ್‌ನ ನಂತರ ದೇಶದ ಎರಡನೇ ಅತ್ಯಾಧುನಿಕ ಬಳೆ ತಯಾರಿಕಾ ಕೇಂದ್ರವಾಗಿ ಹೊರಹೊಮ್ಮುತ್ತಿದೆ. ದಕ್ಷಿಣ ಭಾರತದಲ್ಲಿ ಈ ರೀತಿಯ ಬಳೆ ತಯಾರಿಸುವುದರಲ್ಲಿ ಮೊದಲನೇಯದಾಗಿದೆ. ಈ ಪಾರಂಪರಿಕ ಕರಕುಶಲತೆಯನ್ನು ಉಳಿಸಿಕೊಳ್ಳುವ ಮತ್ತು ವಿಸ್ತರಿಸುವ ನಿಟ್ಟಿನಲ್ಲಿ ಸ್ಥಳೀಯ ಯುವಕರು ಮುರಗೋಡು ಬಳೆ ಉತ್ಪಾದನಾ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಆಧುನಿಕ ತಯಾರಿಕಾ ಯೋಜನೆಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ರಾಜ್ಯ ಸರ್ಕಾರ 35 ವರ್ಷಗಳ ಗುತ್ತಿಗೆ ಒಪ್ಪಂದದಡಿ ಗ್ರಾಮದ ಹೊರವಲಯದಲ್ಲಿ ಐದು ಎಕರೆ ಪ್ರದೇಶಕ್ಕೆ ಅನುಮೋದನೆ ನೀಡಿದೆ.

## ಓದುಗರ ಅನಿಸಿಕೆ...


ಪಟ್ಟಣ ಸಹಕಾರ ಬ್ಯಾಂಕುಗಳ
ವಾರ್ತಾ ಪತ್ರಿಕೆ

**ಸ್ವಾಗತಾರ್ಹವಾಗಿದೆ :** ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ತಂತ್ರಜ್ಞಾನ ಆಧಾರಿತ ನೆರವು ನೀಡುವ ಉದ್ದೇಶದಿಂದ ಬಹು ಭಾಷಾ ಎಐ ಆಧಾರಿತ ಭಾರತ್ ವಿಸ್ತಾರ್ ಯೋಜನೆ ರೂಪಿಸುವುದಾಗಿ ಘೋಷಿಸಲಾಗಿದೆ. ಇದರಿಂದ ರೈತರಿಗೆ ಹವಾಮಾನ, ಮಾರುಕಟ್ಟೆ ಮತ್ತು ತಾಂತ್ರಿಕ ನೆರವಿನ ಮಾಹಿತಿ ಸಕಾಲಕ್ಕೆ ದೊರೆಯಲಿದ್ದು ಅವರುಗಳು ಕಷ್ಟನಷ್ಟದಿಂದ ಪಾರಾಗಲಿದ್ದಾರೆ. ಇದೊಂದು ಸ್ವಾಗತಾರ್ಹವಾಗಿದೆ.

**ಬಸವಪ್ಪ ಶರಣಪ್ಪ ಪಾಟೀಲ್ ವ್ಹಿ., ಹುಮನಾಬಾದ್**

**ಧನ್ಯವಾದಗಳು :** ಮುಂದಿನ ದಿಗಳಲ್ಲಿ ಎಟಿಎಂ ಯಂತ್ರಗಳಲ್ಲಿ ರೂ. 10, 20 ಮತ್ತು 50ಗಳ ನೋಟುಗಳೂ ಲಭ್ಯವಾಗಲಿವೆ ಎಂದು ತಿಳಿದು ಸಂತೋಷವಾಯಿತು. ಇದರಿಂದ ದೈನಂದಿನ ದಿನಸಿ, ತರಕಾರಿ, ಹಾಲು ಹಂಪಲು ಕೊಳ್ಳುವ ಗ್ರಾಹಕರಿಗೆ ಹಾಗೂ ವ್ಯಾಪಾರಸ್ಥರಿಗೆ ಅನುಕೂಲವಾಗಲಿದೆ. ಜನರಿಗೆ ನಗದು ಹಣದ ಅನಿವಾರ್ಯತೆ ಇರುವುದನ್ನು ಅರ್ಥಮಾಡಿಕೊಂಡ ರಿಸರ್ವ್ ಬ್ಯಾಂಕಿಗೆ ಧನ್ಯವಾದಗಳು.

**ಕುಲಶೇಖರಪ್ಪ ಎಂ., ಚಿತ್ರದುರ್ಗ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.